**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.**

**ಸಿ.ಸಿ. 775/2021**

ಸಾಕ್ಷಿದಾರರ ಹೇಳಿಕೆ ಃ

| | | | |
|---|---|---|---|
| ಹೆಸರು | ಃ | ನಾರಾಯಣ | ಚಾಸಾಃ **3** ಪ್ರಾಸಾಃ **3** |
| ತಂದೆಯ ಹೆಸರು | ಃ | ಕೃಷ್ಣಪ್ಪ | |
| ವಯಸ್ಸು | ಃ | 42 ವರ್ಷ | |
| ವೃತ್ತಿ | ಃ | ವ್ಯವಸಾಯ | |
| ವಾಸಸ್ಥಳ | ಃ | ಬೆಳ್ಳಾಳೆ ಗ್ರಾಮ | |

ದಿನಾಂಕಃ **24.06.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01**. ಮೃತ ನಾಗೇಶ್ ನಮ್ಮ ಪಕ್ಕದ ಊರಿನವರು. ಅವರು ಹೇಗೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ಕಾಣ್ಣಾರೆ ಕಂಡಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಅಪಘಾತ ಹೇಗಾಯಿತು ಗೊತ್ತಿಲ್ಲ. ಯಾರ ತಪ್ಪಿನಿಂದ ಅಪಘಾತವಾಯಿತು ನನಗೆ ಗೊತಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.)**

ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ

**01**. ದಿನಾಂಕಃ 11.04.2021 ರಂದು ನಾನು ನನ್ನ ಸ್ವಂತ ಕೆಲಸದ ಮೇರೆಗೆ ಸಂಜೆ 4.30 ಗಂಟೆಗೆ ನನ್ನ ಬೈಕ್ ನಲ್ಲಿ ಬರುವಾಗ ರಮೇಶ್ ರವರ ಜಮೀನಿನ ನೇರದಲ್ಲಿ ಒಂದು ಬೈಕ್ ಸವಾರ ಹಿಂಭಾದಲ್ಲಿ ಒಬ್ಬ ವ್ಯಕ್ತಿಯನ್ನು ಕೂರಿಸಿಕೊಂಡು ಅತಿವೇಗ ಮತ್ತು

ಅಜಾಗರುಕತೆಯಿಂದ ಓಡಿಸಿಕೊಂಡು ಬಂದ ಎಂದರೆ ಸರಿಯಲ್ಲ. ಆಗ ರಸ್ತೆಗೆ ಅಡ್ಡಲಾಗಿ ನಾಯಿ ಬಂದಿದ್ದರಿಂದ ನಿಯಂತ್ರಿಸಲಾಗದೇ ಸಡನ್ನಾಗಿ ಬ್ರೇಕ್ ಹಾಕಿದ್ದರಿಂದ ಬೈಕ್ ಸ್ಕಿಡ್ ಆಗಿ ಬಿದ್ದ ಪರಿಣಾಮ ಬೈಕ್ ನ ಹಿಂಬಾದಲ್ಲಿ ಕುಳಿತಿದ್ದ ವ್ಯಕ್ತಿ ಕುತ್ತಿಗೆಯ ಬಳಿ ಪೆಟ್ಟಾಗಿದೆ ಎಂದರೆ ಸರಿಯಲ್ಲ. ನಾನು ಹತ್ತಿರ ಹೋಗಿ, ಅವರನ್ನು ಉಪಚರಿಸಿ ನೋಡಲಾಗಿ ಬೈಕ್ ಓಡಿಸುತ್ತಿದ್ದವನು ನ್ಯಾಯಾಲಯದ ಮುಂದಿರುವ ಆರೋಪಿ ಎಂದು ತಿಳಿಯಿತು ಎಂದರೆ ಸರಿಯಲ್ಲ. ಹಿಂಭಾದಲ್ಲಿದ್ದ ನಾಗೇಶ್ ನನ್ನು ಉಪಚರಿಸಿ ನಾನು ಎಂ.ಶೆಟ್ಟಹಳ್ಳಿಗೆ ಹೋಗಿ, ಕೆಂಪರಾಜುರವರಿಗೆ ನಿಮ್ಮ ಮಗನಿಗೆ ಅಪಘಾತವಾಗಿದೆ ಎಂದು ತಿಳಿಸಿದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ದಿಃ21.04.2021 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-**6** ಎಂದು ಗುರುತಿಸಲಾಯಿತು. ನನಗೆ ಎಲ್ಲ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಏನು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

**I/C 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ.

ಸಾಕ್ಷಿದಾರರ ಸಹಿ.